## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ–06

ಚಾಸಾ–09

| | | |
|---|---|---|
| ಸಾಕ್ಷಿಯ ಹೆಸರು | – | ಸಿದ್ದಪ್ಪ ಪೂಜಾರ |
| ತಂದೆ ಹೆಸರು | – | ಬೀರಪ್ಪ |
| ವಯಸ್ಸು | – | 53 ವರ್ಷ |
| ಉದ್ಯೋಗ | – | ನಿರೀಕ್ಷಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಉಪ ವಿಭಾಗ , ಹುಬ್ಬಳ್ಳಿ |
| ವಾಸಸ್ಥಳ | – | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 11–03–2024 |

## ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು 26–12–2018 ರಿಂದ ಇಲ್ಲಿಯವರೆಗೆ ನಾನು ಹುಬ್ಬಳ್ಳಿಯ ಎ ಪಿ ಎಂ ಸಿಯಾರ್ಡ ನಲ್ಲಿ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 2–9–2020 ರಂದು ನಾನು ಕಚೇರಿಯಲ್ಲಿದ್ದಾಗ ನನ್ನ ಮೇಲಾಧಿಕಾರಿಗಳು ಸಬ ಅರ್ಬನ ಠಾಣೆಯಿಂದ ಒಂದು ಪತ್ರ ಬಂದಿದ್ದು ಸಬ ಅರ್ಬನ ಪೊಲೀಸಠಾಣೆಗೆ ಹೋಗಿ ಎಂದು ಹೇಳಿದರು. ಅದರಂತೆ ನಾನು ತೂಕದ ಮಶೀನನೊಂದಿಗೆ ಠಾಣೆಗೆ 5 ಘಂಟೆಗೆ ಹೋಗಿದ್ದೇನೆ. ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು , ಆರೋಪಿಗಳನ್ನು ಹಿಡಿದಲ್ಲಿ ಗಾಂಜಾ ತೂಕ ಮಾಡಿಕೊಡಬೇಕು ಎಂದು ತಿಳಿಸಿ ನನಗೆ ನೋಟೀಸು ನೀಡಿದ್ದಾರೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ–53 ಎಂದು

ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ಈಗಾಗಲೇ ನಿಶಾನೆ ಪಿ– 53 ಬಿ ಎಂದುಗುರುತಿಸಿದೆ. ನಾನು ಒಪ್ಪಿಕೊಂಡು ಸಹಿ ಮಾಡಿದ್ದೇನೆ.

3. ಅದೇ ದಿನ ಸಂಜೆ 5.15 ಘಂಟೆಗೆ ನಾನು , ಪೊಲೀಸ ಸಿಬ್ಬಂದಿಯವರು ಒಂದು ಜೀಪನಲ್ಲಿ ಹಾಗೂ ಇನ್ನೊಂದು ಜೀಪನಲ್ಲಿ ಇನ್ಸಪೆಕ್ಟರ , ಪಂಚರು ಮತ್ತು ಪತ್ರಾಂಕಿತ ಅಧಿಕಾರಿ ಸೇರಿಕೊಂಡು ದೇಸಾಯಿ ಸರ್ಕಲ ಬಳಿ ಹೋಗಿದ್ದೇವೆ. ಅಲ್ಲಿ ನಿಂತು ಗಮನಿಸಲಾಗಿ 5.50 ಘಂಟೆ ಸುಮಾರಿಗೆ ಒಂದು ಮೋಟಾರ ಸೈಕಲ ಪಿಂಟೊ ಸರ್ಕಲ ಕಡೆಯಿಂದ ಬಂದಿದ್ದು ಐ ಬಿ ಕಡೆಗೆ ಸದರಿ ಮೋಟಾರ ಸೈಕಲ ಹೋಯಿತು. ಪೊಲೀಸರು ಹಿಡಿಯಲು ಪ್ರಯತ್ನಿಸಿದಾಗ ಸದರಿ ಮೋಟಾರ ಸೈಕಲ ಕಚ್ಚಾ ರಸ್ತೆಯ ಕಡೆ ಹೋಗಿರುತ್ತದೆ. ಆ ಸಮಯದಲ್ಲಿ ನಾವೆಲ್ಲರೂ ಹೋಗಿ ಸದರಿ ಮೋಟಾರ ಸೈಕಲ ಸವಾರರನ್ನು ಹಿಡಿದುಕೊಂಡಿದ್ದೇವೆ. ಸದರಿ ವ್ಯಕ್ತಿಗಳ ಹೆಸರು ಕೇಳಲಾಗಿ ಮೋಟಾರ ಸೈಕಲ ಚಾಲಕನ ಹೆಸರು ಮಾರುತಿ ಕಲ್ಲಪ್ಪ ಹರಿಣಶಿಕಾರಿ ಮತ್ತು ಹಿಂಬದಿ ಸವಾರನ ಹೆಸರು ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ಹೇಳಿದರು. ಮೋಟಾರ ಸೈಕಲನಲ್ಲಿ ಕುಳಿತ ವ್ಯಕ್ತಿಯ ಬೆನ್ನಿನ ಹಿಂಬಾಗದಲ್ಲಿ ಒಂದು ಕಪ್ಪು ಬಣ್ಣದ ಚೀಲ ಇದ್ದು ಅದರಲ್ಲಿ ಎರಡು ಪ್ಲಾಸ್ಟಿಕ ಪಾಕೇಟಗಳು ಸಿಕ್ಕವು , ಸದರಿ ಪಾಕೇಟಗಳಿಂದ ಘಾಟು ವಾಸನೆ ಬರುತ್ತಿತ್ತು, ಪೊಲೀಸರು ಅದನ್ನು ತೂಕ ಮಾಡುವಂತೆ ನನಗೆ ತಿಳಿಸಿದರು. ಅದರಂತೆ ಒಂದು ಪಾಕೇಟನ್ನು ತೂಕ ಮಾಡಲಾಗಿ ಅದರಲ್ಲಿ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಹಾಗೂ ಇನ್ನೊಂದು ಪ್ಲಾಸಿಕ ಪ್ಯಾಕನಲ್ಲಿ 2 ಕೆಜಿ 20 ಗ್ರಾಂ ತೂಕದ ಗಾಂಜಾ ಇತ್ತು. ಹಿಂಬದಿ ಸವಾರನ ಹತ್ತಿರ ಹಳದಿ ಬ್ಯಾಗ ಇದ್ದು ಅದರಲ್ಲಿ ಒಂದು ಪ್ಲಾಸ್ಟಿಕ ಬ್ಯಾಗ ಇದ್ದು ಅದರಲ್ಲಿ ಗಾಂಜಾ ಇದ್ದು ಅದನ್ನು ತೂಕ ಮಾಡಲಾಗಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು. 1 ನೇ ಆರೋಪಿಯ ತಾಬಾದಲ್ಲಿದ್ದ ಪಾಕೇಟಗಳಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದುಕೊಳ್ಳಲಾಯಿತು ಮತ್ತು ಅದನ್ನು ಪ್ಯಾಕ ಮಾಡಿ ಸೀಲ ಮಾಡಲಾಯಿತು. ಉಳಿದ ಗಾಂಜಾವನ್ನು ಸಹ

ಪ್ರತ್ಯೇಕವಾಗಿ ಪ್ಯಾಕ ಮಾಡಲಾಯಿತು. 1 ನೇ ಆರೋಪಿಯ ತಾಬಾದಿಂದ 1000 ರೂ ಹಣವನ್ನು ಅಮಾನತುಪಡಿಸಿಕೊಳ್ಳಲಾಯಿತು.

4. 2 ನೇ ಆರೋಪಿತನ ತಾಬಾದಿಂದ ದೊರೆತ ಗಾಂಜಾದಿಂದ 50 ಗ್ರಾಂಜಾವನ್ನು ಮಾದರಿಗಾಗಿ ಪಡೆದು ಪಾಕ ಮಾಡಿ ಸೀಲ ಮಾಡಲಾಯಿತು. ಉಳಿದ ಗಾಂಜಾವನ್ನು ಸಹ ಪ್ಯಾಕ ಮಾಡಲಾಯಿತು. ಸ್ಯಾಂಪಲ ಗಾಂಜಾ ಪಾಕೇಟಗಳಿಗೆ ಎಸ್ 1 , ಎಸ್2 ಮತ್ತು ಎಸ್ 3 ಎಂದು ಗುರುತು ನೀಡಲಾಯಿತು. ಉಳಿದ ಗಾಂಜಾಗಳಿಗೆ ಆರ್–1 , ಆರ್–2 ಮತ್ತು ಆರ್ –3 ಎಂದು ಗುರುತು ನೀಡಲಾಯಿತು. ಆರೋಪಿ 1 ಮತ್ತು 2 ರವರ ಹತ್ತಿರ ಇದ್ದ ಬ್ಯಾಗನ್ನು ಸಹ ಅಮಾನತುಪಡಿಸಿಕೊಳ್ಳಲಾಯಿತು. ಮೋಟಾರ ಸೈಕಲನ್ನು ಸಹ ಜಪ್ತಿಪಡಿಸಿಕೊಳ್ಳಲಾಯಿತು. ಎಸ್1 , ಎಸ್ 2 ಮತ್ತು ಎಸ್ 3 ಮೇಲೆ ಪೊಲೀಸ ಇನ್ಸಪೆಕ್ಟರ , ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಹಿಹಿವುಳ್ಳ ಚೀಟಿ ಅಂಟಿಸಲಾಯಿತು. ಅದರಂತೆ ಆರ್1, ಆರ್–2 ಮತ್ತು ಆರ್–3 ಮೇಲೆ ಪೊಲೀಸ ಇನ್ಸಪೆಕ್ಟರ , ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಹಿಹಿವುಳ್ಳ ಚೀಟಿ ಅಂಟಿಸಲಾಯಿತು ಸ್ಥಳದಲ್ಲಿ 6.15 ರಿಂದ 8.15 ರ ವರೆಗೆ ಪಂಚನಾಮೆ ಬರೆಯಲಾಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿ– 3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 3 ( ಓ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಫೋಟೊ ತೆಗೆದಿದ್ದಾರೆ . ಸದರಿ ಫೋಟೊಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನಿಶಾನೆ ಪಿ– 4 ರಿಂದ 37 ಎಂದು ಗುರುತಿಸಲಾಗಿದೆ.

5. ಜಪ್ತಿ ಮಾಡಿದ ಮೋಟಾರ ಸೈಕಲನ ಫೋಟೊ ಗುರುತಿಸುತ್ತೇನೆ. ಅವುಗಳನ್ನು ನಿಶಾನೆ ಪಿ– 38 ರಿಂದ 41 ಎಂದು ಗುರುತಿಸಲಾಗಿದೆ. ಅಮಾನತುಪಡಿಸಿದ ವಸ್ತುಗಳನ್ನು ನೋಡಿದರೆ

ಗುರುತಿಸುತ್ತೇನೆ. ಸ್ಯಾಂಪಲ ಗಳನ್ನು ಮಮೂ-1 ರಿಂದ 3 , 2 ಬ್ಯಾಗಗಳನ್ನು ಮುಮಾ-4 ಮತ್ತು 5 ಎಂದು , ರೂ. 1000/- ಹಣವನ್ನು ಮುಮಾ- 6 ಎಂದು ಗುರುತಿಸಲಾಗಿದೆ.

6. ಆರೋಪಿ ಮಾರುತಿ ಮತ್ತು ಚಂದಪ್ಪ ಹರಿಣಶಿಕಾರಿ ರವರನ್ನು ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದ ಮುಂದಿರುವ ಆರೋಪಿ -1 ಮತ್ತು 2 ಇರುತ್ತಾರೆ. ನಂತರ ಆರೋಪಿತರು , ಮುದ್ದೆಮಾಲುಗಳ ಸಮೇತ ಠಾಣೆಗೆ ಹೋಗಿದ್ದೇವೆ. ಪೊಲೀಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ .

## ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಟಿ ಅರ್ ಪಿ ವಕೀಲರಿಂದಃ

7. ಪೊಲೀಸ ಠಾಣೆಯಿಂದ ನಮ್ಮ ಮೇಲಾಧಿಕಾರಿಗೆ ಸಂಜೆ 4.15 ಘಂಟೆಗೆ ಪತ್ರ ಬಂದಿರುತ್ತದೆ. 4.30 ಘಂಟೆಗೆ ನಾನು ಕಚೇರಿಯನ್ನು ಬಿಟ್ಟಿದ್ದೇನೆ. ನಾನು ಮತ್ತು ನನ್ನ ಅಸಿಸ್ಟಂಟ ಸೇರಿ ನನ್ನ ಮೋಟಾರ ಸೈಕಲನಲ್ಲಿ ಹೋಗಿದ್ದೇನೆ. ನಮ್ಮ ಕಚೇರಿಯಲ್ಲಿ ಮೂವಮೆಂಟ ರಜಿಸ್ಟರ ಇಟ್ಟಿದ್ದೇವೆ. ನಾನು ಫೀಲ್ಡ ಆಫೀಸರ್ ಆಗಿದ್ದರಿಂದ ಎಷ್ಟು ಘಂಟೆಗೆ ಕಚೇರಿಗೆ ಬಂದಿದ್ದೇನೆ ಹಾಗೂ ಎಷ್ಟು ಘಂಟೆಗೆ ಕಚೇರಿಯಿಂದ ಹೊರಗೆ ಹೋಗಿರುತ್ತೇನೆ ಎಂದು ನಮೂದು ಮಾಡುವುದಿಲ್ಲ. ಸಾಮಾನವಾಗಿ ಫೀಲ್ಡ ಆಫೀಸರ್ ಕಚೇರಿ ಯಿಂದ ಹೊರಗೆ ಇರುತ್ತಾರೆ ಅಂದರೆ ಸರಿ. ಆ ದಿನ ನಾನು ಕಚೇರಿಯಲ್ಲಿದ್ದೆನು. ನಾನು ಕಚೇರಿಯಲ್ಲಿದ್ದ ಬಗ್ಗೆ ದಾಖಲೆಗೆ ನನ್ನ ಸಹಿ ಇದೆ . ನನ್ನ ಮೇಲಾಧಿಕಾರಿ ಮೌಖಿಕವಾಗಿ ನನಗೆ ಠಾಣೆಗೆ ಹೋಗುವಂತೆ ಸೂಚಿಸಿದರು. ನನಗೆ ಮೌಖಿಕ ಆದೇಶ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಠಾಣೆ ತಲುಪಿದಾಗ 5 ಘಂಟೆ ಆಗಿತ್ತು. ಪೊಲೀಸರು ನನಗೆ ನೋಟೀಸು ನೀಡಿದಾಗ 5.05

ಘಂಟೆ ಆಗಿರಬಹುದು. ನೋಟೀಸ ಪಡೆದುಕೊಳ್ಳುವ ಸಮಯದಲ್ಲಿ ನಾನು ಸಮಯ ನಮೂದಿಸಿಲ್ಲ. ಸಮಯ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ನಾನು ಆದಿನ ಠಾಣೆಗೆ ಹೋಗದೆ ಇರುವ ಕಾರಣ ಸಮಯವನ್ನು ನಮೂದಿಸಿಲ್ಲ ಅಂದರೆ ಸರಿಯಲ್ಲ. ಮುದ್ದೆಮಾಲುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನಾನು ಸಹಿ ಮಾಡಿಲ್ಲ. ಆ ದಿನ ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಮತ್ತು ಪೊಲೀಸರು ನೀಡಿದ ಪತ್ರಕ್ಕೆ ಸಹಿ ಮಾಡಿದ್ದೇನೆ.

8. ಠಾಣೆಯಿಂದ ನಾವು ದೇಸಾಯಿ ಸರ್ಕಲಗೆ ಹೋದಾಗ ಸಂಜೆ 5.30 ಘಂಟೆ ಆಗಿತ್ತು. ಠಾಣೆಯಿಂದ ನಾವು ಸ್ಥಳಕ್ಕೆ ಹೋದ ಸರ್ಕಾರಿ ವಾಹನದ ನೊಂದಣಿ ಸಂಖ್ಯೆ ನೆನಪಿಲ್ಲ. ಸಂಜೆ 6.15 ರಿಂದ 8.15 ರ ಅವಧಿಯಲ್ಲಿ ಕತ್ತಲು ಇತ್ತು ಅಂದರೆ ಸರಿ. ನಮ್ಮ ಕಚೇರಿಗೆ ಪತ್ರವನ್ನು ಪೊಲೀಸರು ತಂದಿದ್ದಾರೆ ಎಂದು ಮೇಲಾಧಿಕಾರಿ ಹೇಳಿದರು. ಪಂಚನಾಮೆಯನ್ನು ಪೊಲೀಸರು ಬರೆದಿದ್ದಾರೆ. ಪಂಚನಾಮೆಯನ್ನು ಬರೆದ ಪೊಲೀಸ ಸಿಬ್ಬಂದಿಯ ಹೆಸರು ಗೊತ್ತಿಲ್ಲ. ಯಾವ ಪೊಲೀಸ ಸಿಬ್ಬಂದಿ ಮೊದಲಿಗೆ ಆರೋಪಿಯನ್ನು ಹಿಡಿದಿದ್ದಾರೆ ಎಂದು ಹೇಳಲಾಗುವುದಿಲ್ಲ. ಪಂಚನಾಮೆಯಲ್ಲಿ ನೋಟುಗಳ ಮುಖಬೆಲೆ ಬರೆದಿಲ್ಲ. ಆರೋಪಿಯ ಮೋಟಾರ ಸೈಕಲನ ನೊಂದಣಿ ಸಂಖ್ಯೆಯನ್ನು ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ. ಪಂಚನಾಮೆಯನ್ನು ನಾವು ಮತ್ತು ಪೊಲೀಸರ ಸೇರಿಕೊಂಡು ಠಾಣೆಯಲ್ಲಿ ಕುಳಿತುಕೊಂಡು ಬರೆದಿದ್ದೇವೆ ಅಂದರೆ ಸರಿಯಲ್ಲ.

9. ದಿಃ 2-9-2020 ರಂದು ನಾನು ಕಚೇರಿಯಲ್ಲಿದ್ದಾಗ ನನ್ನ ಮೇಲಾಧಿಕಾರಿಗಳು ಸಬ ಅರ್ಬನ ಠಾಣೆಯಿಂದ ಒಂದು ಪತ್ರ ಬಂದಿದ್ದು ಸಬ ಅರ್ಬನ ಪೊಲೀಸಠಾಣೆಗೆ ಹೋಗಿ ಎಂದು ಹೇಳಿದ್ದು ಅದರಂತೆ ನಾನು ತೂಕದ ಮಶೀನನೊಂದಿಗೆ ಠಾಣೆಗೆ 5 ಘಂಟೆಗೆ ಹೋಗಿದ್ದು ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು , ಆರೋಪಿಗಳನ್ನು ಹಿಡಿದಲ್ಲಿ

ಗಾಂಜಾ ತೂಕ ಮಾಡಿಕೊಡಬೇಕು ಎಂದು ತಿಳಿಸಿ ನನಗೆ ನೋಟೀಸು ನೀಡಿದ್ದು ಅದಕ್ಕೆ ನಾನು ಒಪ್ಪಿಕೊಂಡು ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10. ಅದೇ ದಿನ ಸಂಜೆ 5.15 ಘಂಟೆಗೆ ನಾನು , ಪೊಲೀಸ ಸಿಬ್ಬಂದಿಯವರು ಒಂದು ಜೀಪನಲ್ಲಿ ಹಾಗೂ ಇನ್ನೊಂದು ಜೀಪನಲ್ಲಿ ಇನ್ಸಪೆಕ್ಟರ , ಪಂಚರು ಮತ್ತು ಪತ್ರಾಂಕಿತ ಅಧಿಕಾರಿ ಸೇರಿಕೊಂಡು ದೇಸಾಯಿ ಸರ್ಕಲ ಬಳಿ ಹೋಗಿ ಅಲ್ಲಿ ನಿಂತು ಗಮನಿಸಲಾಗಿ 5.50 ಘಂಟೆ ಸುಮಾರಿಗೆ ಒಂದು ಮೋಟಾರ ಸೈಕಲ ಪಿಂಟೊ ಸರ್ಕಲ ಕಡೆಯಿಂದ ಬಂದಿದ್ದು ಐ ಬಿ ಕಡೆಗೆ ಸದರಿ ಮೋಟಾರ ಸೈಕಲ ಹೋಯಿತು ಮತ್ತು ಪೊಲೀಸರು ಹಿಡಿಯಲು ಪ್ರಯತ್ನಿಸಿದಾಗ ಸದರಿ ಮೋಟಾರ ಸೈಕಲ ಕಚ್ಚಾ ರಸ್ತೆಯ ಕಡೆ ಹೋಗಿರುತ್ತದೆ ಹಾಗೂ ಆ ಸಮಯದಲ್ಲಿ ನಾವೆಲ್ಲರೂ ಹೋಗಿ ಸದರಿ ಮೋಟಾರ ಸೈಕಲ ಸವಾರರನ್ನು ಹಿಡಿದುಕೊಂಡು ಸದರಿ ವ್ಯಕ್ತಿಗಳ ಹೆಸರು ಕೇಳಲಾಗಿ ಮೋಟಾರ ಸೈಕಲ ಚಾಲಕನ ಹೆಸರು ಮಾರುತಿ ಕಲ್ಲಪ್ಪ ಹರಿಣಶಿಕಾರಿ ಮತ್ತು ಹಿಂಬದಿ ಸವಾರನ ಹೆಸರು ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

11. ಮೋಟಾರ ಸೈಕಲನಲ್ಲಿ ಕುಳಿತ ವ್ಯಕ್ತಿಯ ಬೆನ್ನಿನ ಹಿಂಬಾಗದಲ್ಲಿ ಒಂದು ಕಪ್ಪು ಬಣ್ಣದ ಚೀಲ ಇದ್ದು ಅದರಲ್ಲಿ ಎರಡು ಪ್ಲಾಸ್ಟಿಕ ಪಾಕೇಟಗಳು ಸಿಕ್ಕವು , ಸದರಿ ಪಾಕೇಟಗಳಿಂದ ಘಾಟು ವಾಸನೆ ಬರುತ್ತಿತ್ತು, ಪೊಲೀಸರು ಅದನ್ನು ತೂಕ ಮಾಡುವಂತೆ ನನಗೆ ತಿಳಿಸಿದ್ದು ಅದರಂತೆ ಒಂದು ಪಾಕೇಟನ್ನು ತೂಕ ಮಾಡಲಾಗಿ ಅದರಲ್ಲಿ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಹಾಗೂ ಇನ್ನೊಂದು ಪ್ಲಾಸಿಕ ಪ್ಯಾಕನಲ್ಲಿ 2 ಕೆಜಿ 20 ಗ್ರಾಂ ತೂಕದ ಗಾಂಜಾ ಇತ್ತು ಹಾಗೂ ಹಿಂಬದಿ ಸವಾರನ ಹತ್ತಿರ ಹಳದಿ ಬ್ಯಾಗ ಇದ್ದು ಅದರಲ್ಲಿ ಒಂದು ಪ್ಲಾಸ್ಟಿಕ ಬ್ಯಾಗ ಇದ್ದು ಅದರಲ್ಲಿ ಗಾಂಜಾ ಇದ್ದು ಅದನ್ನು ತೂಕ ಮಾಡಲಾಗಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿಯ

ತಾಬಾದಲ್ಲಿದ್ದ ಪಾಕೇಟಗಳಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದುಕೊಳ್ಳಲಾಯಿತು ಮತ್ತು ಅದನ್ನು ಪ್ಯಾಕ ಮಾಡಿ ಸೀಲ ಮಾಡಲಾಯಿತು. ಉಳಿದ ಗಾಂಜಾವನ್ನು ಸಹ ಪ್ರತ್ಯೇಕವಾಗಿ ಪ್ಯಾಕ ಮಾಡಲಾಯಿತು ಹಾಗೂ 1 ನೇ ಆರೋಪಿಯ ತಾಬಾದಿಂದ 1000 ರೂ ಹಣವನ್ನು ಅಮಾನತುಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

12. 2 ನೇ ಆರೋಪಿತನ ತಾಬಾದಿಂದ ದೊರೆತ ಗಾಂಜಾದಿಂದ 50 ಗ್ರಾಂಜಾವನ್ನು ಮಾದರಿಗಾಗಿ ಪಡೆದು ಪಾಕ ಮಾಡಿ ಸೀಲ ಮಾಡಲಾಯಿತು ಹಾಗೂ ಉಳಿದ ಗಾಂಜಾವನ್ನು ಸಹ ಪ್ಯಾಕ ಮಾಡಲಾಯಿತು. ಸ್ಯಾಂಪಲ ಗಾಂಜಾ ಪಾಕೇಟಗಳಿಗೆ ಎಸ್ 1 , ಎಸ್2 ಮತ್ತು ಎಸ್ 3 ಎಂದು ಗುರುತು ನೀಡಲಾಯಿತು ಹಾಗೂ ಉಳಿದ ಗಾಂಜಾಗಳಿಗೆ ಆರ್-1 , ಆರ್-2 ಮತ್ತು ಆರ್ -3 ಎಂದು ಗುರುತು ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರ ಹತ್ತಿರ ಇದ್ದ ಬ್ಯಾಗನ್ನು ಸಹ ಅಮಾನತುಪಡಿಸಿಕೊಳ್ಳಲಾಯಿತು ಮತ್ತು ಮೋಟಾರ ಸೈಕಲನ್ನು ಸಹ ಜಪ್ತಿಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎಸ್1 , ಎಸ್ 2 ಮತ್ತು ಎಸ್ 3 ಮೇಲೆ ಪೊಲೀಸ ಇನ್ಸಪೆಕ್ಟರ , ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಹಿವುಳ್ಳ ಚೀಟಿ ಅಂಟಿಸಲಾಯಿತು ಹಾಗೂ ಆರ್1, ಆರ್-2 ಮತ್ತು ಆರ್-3 ಮೇಲೆ ಪೊಲೀಸ ಇನ್ಸಪೆಕ್ಟರ , ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಹಿವುಳ್ಳ ಚೀಟಿ ಅಂಟಿಸಿ ಸ್ಥಳದಲ್ಲಿ 6.15 ರಿಂದ 8.15 ರ ವರೆಗೆ ಪಂಚನಾಮೆ ಬರೆಯಲಾಯಿತು ಮತ್ತು ಪಂಚನಾಮೆ ಕಾಲಕ್ಕೆ ಫೋಟೊ ತೆಗೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

13. ನಂತರ ಆರೋಪಿತರು , ಮುದ್ದೆಮಾಲುಗಳ ಸಮೇತ ಠಾಣೆಗೆ ಹೋಗಿದ್ದು ಪೊಲೀಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.